# ದಿನಾ ಬೆಳಗಾದರೆ

■ ಸ. ರಘುನಾಥ
ಕಲೆ: ಸಂತೋಷ್ ಸಸಿಹಿತ್ಲು



ಕಾಳಿಗೆ ಬಂದು
ಆರಿಸಿ ತಿಂದು
ಪುರಪುರ ಪುರ್ರನೆ
ಹಾರುವ ಗುಬ್ಬಿ

ಹಾಲನು ಕುಡಿದು
ಚಂಗನೆ ನೆಗೆದು
ಕುಣಿಕುಣಿ ಕುಣಿಯುವ
ಪುಟಾಣಿ ಕುರಿಮರಿ

ಮೊಟ್ಟೆಯನಿಟ್ಟು
ಓಡುತ ಹೊರಗೆ
ಕೊಕ್ಕರು ಕೊಕ್ಕರು
ಕೂಗುವ ಕೋಳಿ

ಕರುವಿನ ಕೂಡ
ಮೇಯುವುದಕ್ಕೆ
ಅಂಬಾ ಅಂಬಾ
ಆಕಳ ಕೂಗು

ಆಯಿತು ಸಮಯ
ಬನ್ನಿರಿ ಬೇಗ
ಗಣಗಣ ಬಡಿವ
ಶಾಲೆಯ ಗಂಟೆ

ಪುಸ್ತಕ ಚೀಲ
ಬೆನ್ನಿಗೆ ಹಾಕಿ
ಚಕಚಕ ಹೆಜ್ಜೆ
ಗೆಳೆಯರ ಜೊತೆಗೆ ■

## ಕುಂಚ ಪ್ರಪಂಚ



**ಧನಿಕ ಕೆ. ಪಟೇಲ್**
7ನೇ ತರಗತಿ, ಹಾಸನ್ ಪಬ್ಲಿಕ್ ಶಾಲೆ, ಹಾಸನ





**ಸಂಹಿತಾ ಜಿ.ಎಸ್.**
4ನೇ ತರಗತಿ, ಶ್ರೀನಿಕೇತನ ಶಾಲೆ, ಇಸಳೂರು, ಶಿರಸಿ